ಗದಗದ ಲಕ್ಷ್ಮೇಶ್ವರದವರಾದ ನಿರ್ಮಲಾ ಶೆಟ್ಟರ್ ಧಾರವಾಡದಲ್ಲಿ ಹೈಸ್ಕೂಲ್ ಶಿಕ್ಷಕಿ. 'ಬೆಳಕಿನೊಡನೆ ಪಯಣ', 'ಸರಹದ್ದುಗಳಿಲ್ಲದ ಭೂಮಿಯ ಕನಸು', 'ನಿನ್ನ ಧ್ಯಾನಿಸಿದ ಮೇಲೂ' ಕವನ ಸಂಕಲನಗಳು. ಲಲಿತಪ್ರಬಂಧಗಳು ಅವರ ಆಸಕ್ತಿಯ ಮತ್ತೊಂದು ಕ್ಷೇತ್ರ.

ಹೋಗುವಾಗ ಧರಿಸಲು ಚಂದನೆಯ, ದುಬಾರಿಯ ಮತ್ತು ತೊಟ್ಟ ಬಟ್ಟೆಗೆ ಮ್ಯಾಚಿಂಗ್ ಚಪ್ಪಲಿ ಎನ್ನುವುದು ಇಂದಿನವರೆಲ್ಲರ ಮನಸ್ಥಿತಿಯಾಗಿದೆ. ಇದು ತಪ್ಪೆಂದು ನನ್ನ ಅಭಿಪ್ರಾಯವಲ್ಲ. ಪ್ರತಿಯೊಬ್ಬರಿಗೂ ಅವರಿಷ್ಟದಂತೆ ಜೀವನ ಮಾಡಲು ಹಕ್ಕಿದೆ. 'ಚಪ್ಪಲಿಯಿಂದ ಎಲ್ಲರ ಜೀವನಮಟ್ಟದಲ್ಲಿ ಸುಧಾರಣೆಯಾಗಿದೆ' ಎಂದು ಸಮಾಧಾನಕ್ಕೆಂದು ನಾನು ಅಂದುಕೊಳ್ಳಬಹುದಷ್ಟೆ. (ತೋರ್ಪಡಿಕೆ) ಇದೆಲ್ಲಾ ಆಧುನಿಕತೆಯ ಕೊಡುಗೆ ಎಂದುಕೊಳ್ಳೋಣ ಎಂದರೆ, ಒಂದು ಯೋಚನೆ ತಲೆಯಲ್ಲಿ ಧುತ್ತೆಂದು ಬಂದೇ ಬಿಡುತ್ತದೆ. ಆಧುನಿಕತೆಯ ಈ ಕಾಲದಲ್ಲೂ, ಅಮಾವಾಸ್ಯೆಯಂದು, ಶನಿವಾರದಂದು, ಹುಟ್ಟಿದ ಹಬ್ಬದಂದು, ಅದೇನೋ ಅನಿಷ್ಟವನ್ನು(ಚಪ್ಪಲಿ) ಮನೆಗೆ ತರಬಾರದು ಎನ್ನುವ ದೃಷ್ಟಿಯಲ್ಲಿ ಚಪ್ಪಲಿಯನ್ನು ಖರೀದಿ ಮಾಡದೇ ಇರುವುದು. ಇಂಥದ್ದನ್ನು ನಾವು ಕಾಣುವುದು ಒಂದೆಡೆಯಾದರೆ, ಇನ್ನೊಂದೆಡೆ ಅದೇ ಮದುವೆ ಎಂಬ ಶುಭಕಾರ್ಯದಲ್ಲಿ ಮದುಮಗ ಹಾಗೂ ಮದುಮಗಳಿಗೆ ಹೊಸ ಚಪ್ಪಲಿಗಳೇ ಬೇಕು. ಸಂಜೆಯ ಹೊತ್ತಿಗೆ ಮದುಮಗನ ಚಪ್ಪಲಿಯನ್ನು ಹೆಣ್ಣಿನ ಕಡೆಯವರಲ್ಲಿ ಮದುಮಗಳ ಅಣ್ಣತಮ್ಮನಾಗುವವರು(ಅಳಿಯ) ಇಲ್ಲವೆ ತಂಗಿ ಅಕ್ಕನಾಗುವವರು (ಸೊಸೆ) ಯಾರಾದರೂ ಮದುವೆಯ ಗಂಡಿನ ಕಾಲುತೊಳೆಯುವ ಸಂದರ್ಭದಲ್ಲಿ ಅವನಿಗೆ ಗೊತ್ತಾಗದೇ ಮುಚ್ಚಿಡುವ ಒಂದು ಸಂಪ್ರದಾಯವೇ ನಮ್ಮಲ್ಲಿ ನಡೆದುಬಂದಿದೆ. ಅಂದರೆ ಮತ್ತೆ ಮದುಮಗ ಆ ಚಪ್ಪಲಿಗಳನ್ನು ವಾಪಸ್ ಪಡೆಯಬೇಕಾದರೆ ಹಣ ಕೊಟ್ಟು ಒಲಿಸಿಕೊಳ್ಳಬೇಕು. ಈ ಆಚರಣೆಯ ಹಿಂದೆ ಎರಡೂ ಮನೆತನದವರು ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳಲಿ, ಬೆರೆಯಲಿ ಎನ್ನುವ, ಅಥವಾ ಮದುವೆಯಾದ ವರಮಹಾಶಯ ಜುಗ್ಗಜಿಪುಣನೋ ಎಂದು ಪರೀಕ್ಷಿಸುವ ಇರಾದೆ ಇರಬಹುದು. ಈ ನೆಪಕ್ಕೆ ಅಳಿಯಮಾವಂದಿರ ನಡುವೆ ಸಂಜೆಯ ತೀರ್ಥಸಮಾರಾಧನೆಯ ಒಪ್ಪಂದಕ್ಕೆ ಬರುವ, ಇಲ್ಲವೇ ತಮ್ಮ ಮನೆ ಮಗಳನ್ನು ಕೊಟ್ಟು ಮದುವೆ ಏನೋ ಮಾಡಿಯಾಯಿತು. ಅವನಿಗೆ ಸೆರೆ ಕುಡಿಯುವ ಚಟವಿದೆಯೋ ಎಂದು ಪರೀಕ್ಷಿಸುವ ಸೂಕ್ಷ್ಮತೆಯನ್ನು ಚಪ್ಪಲಿಯು ಅದು ಹೇಗೆ ನಿಭಾಯಿಸುತ್ತದೆ ನೋಡ್ರಿ. ಹಾಗಾಗಿ ಬರೀ ಚಪ್ಪಲಿ ಎಂದು ಗೌಣ ಮಾಡುವ ಹಾಗಿಲ್ಲ.

ಇಷ್ಟೆಲ್ಲಾ ಚಪ್ಪಲಿ ಕಥೆ ನನಗೆ ನೆನಪಾಗಲು ಮತ್ತೊಂದು ಸಂದರ್ಭ ಒದಗಿ ಬಂದಿತು. ಮೊನ್ನೆ ಮಗಳು 'ಅಮ್ಮಾ ಚಪ್ಪಲಿ ಕೊಡಿಸಮ್ಮ, ನಂಗೆ ಹಾಕ್ಕೊಳ್ಳಾಕ ಛೊಲೋ ಚಪ್ಪಲೀನೇ ಇಲ್ಲಾ' ಎಂದಳಲ್ಲಾ. ಹೊರಗೆ ಹೋಗಿ ಸ್ಟ್ಯಾಂಡ್ ನೋಡತೀನಿ... ಒಂದಲ್ಲಾ ಎರಡಲ್ಲಾ ಮೂರು ಜೊತೆ ಚಪ್ಪಲಿಗಳು ರಾರಾಜಿಸುತ್ತಿದ್ದವು. ಅವಳನ್ನು ಕರೆದು ಅದನ್ನು ತೋರಿಸಿದೆ. ಅದಕ್ಕವಳು, 'ಇದ್ರ ಬೆಲ್ಟ್ ಸಡ್ಲ ಆಗೇತಿ, ಇನ್ನೊಂದರ ಕಲರ್ ಮಾಸೇತಿ.. ಮತ್ತೊಂದ್ರುದ್ದು ಹಿಮ್ಮಡಿ ಸವದೈತಿ ನೋಡು...' ಎಂದು ಒಂದೊಂದರಲ್ಲೂ ಒಂದೊಂದು ಐಬು ಕಂಡುಕೊಂಡವಳಂತೆ ಹೇಳಲಾರಂಭಿಸಿದಳು. ಆ ಕೊರತೆ ಇತ್ತೊ, ಅವಳೇ ಅಂದುಕೊಂಡು ಹೇಳಿದ್ದಳೋ ಗೊತ್ತಿಲ್ಲ. ಆದರೆ, ಮುಖ್ಯವಾಗಿ ಈಗವಳಿಗೆ ಶಾಲೆಯ ಫಂಕ್ಷನ್ ದಿವಸಕ್ಕೊಂದು ಜೋಡು ಹೊಸ ಚಪ್ಪಲಿ ಬೇಕಿತ್ತಷ್ಟೆ. ಸರಿ ಎಂದು ಪ್ಯಾಟೆಗೆ ಕರೆದೊಯ್ದರೆ, ಅವಳು ಹೇಳಿದ ಅಂಗಡಿಗೆ ಹೋಗಿ ಅವಳ ಇಷ್ಟದ ಚಪ್ಪಲಿಯನ್ನು ಕೊಡಿಸಬೇಕಾದರೆ, ಒಂದೂವರೆ ತಾಸು ಸಮಯ ಹಿಡಿಯಿತು. ತಲೆನೋವು ಬಂದಿತು.

ನಾ ಹೈಸ್ಕೂಲ್ ಕಲಿಯುವ ಸಂದರ್ಭದಲ್ಲಿ ನನ್ನ ಕ್ಲಾಸಿನಲ್ಲಿ ರೇಣುಕಾ, ಸಂಗೀತಾ ಎಂಬ ಗೆಳತಿಯರು ಇದ್ದರು. ಇಡೀ ಲಕ್ಷ್ಮೇಶ್ವರದಲ್ಲಿ ಅವರವೇ ಐದೊ ಆರೋ ಚಪ್ಪಲಿ ಅಂಗಡಿಗಳಿದ್ದವು. ಅಲ್ಲಿ ಅವರ ಅಪ್ಪ, ಅವ್ವ, ಕಾಕಾ, ಮಾಮಾ, ಚಿಗವ್ವ, ಅಜ್ಜ, ಅಮ್ಮ ಇವರೇ ಒಂದೊಂದು ಅಂಗಡಿಯ ಮಾಲೀಕರು